# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 213 | Pages. 2 | Date: 03-07-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 213 - ಪುಟಗಳು : 2 - 03 ಜುಲೈ 2025 ಗುರುವಾರ Ph: 8762954248 ದರ : ₹1


# ಹೃದಯಾಘಾತ: ಮನೆ ಮನೆಗೆ ವೈದ್ಯರ ಭೇಟಿ

## ದಿಢೀರ್ ಸಾವಿನ ಕಾರಣ ಪತ್ತೆಗೆ ಕ್ರಮ | ನಾಲ್ಕು ದಿನಗಳಲ್ಲಿ ಮತ್ತೊಂದು ತಂಡ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಪ್ರಕರಣದ ಸತ್ಯಾಸತ್ಯತೆ ತಿಳಿಯಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಹಾಗೂ ವೈದ್ಯರು ಮನೆ ಮನೆ ಭೇಟಿ ಕೈಗೊಂಡಿದ್ದು ಸಮಗ್ರ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಮೇ 28 ರಿಂದ ಇಲ್ಲಿವರೆಗೆ ಜಿಲ್ಲೆಯಲ್ಲಿ 27 ಜನರು ಅಸುನೀಗಿದ್ದು ಹೃದಯಾಘಾತದಿಂದಲೇ ಸಾವು ಸಂಭವಿಸಿದೆ ಎನ್ನಲಾಗಿದೆ. ಸರ್ಕಾರವು ಈ ನಿಟ್ಟಿನಲ್ಲಿ ತಂಡ ರಚಿಸಿದೆ. ಇತ್ತೀಚೆಗೆ ಮೃತರಾದ ಚಿಕ್ಕಕೊಂಡಗೊಳ ಗ್ರಾಮದ ವ್ಯಕ್ತಿಯೊಬ್ಬರ ಮನೆಗೆ ತೆರಳಿದ ಅಧಿಕಾರಿಗಳು ಗಂಟೆಗೂ ಹೆಚ್ಚು ಕಾಲ ಮಾಹಿತಿ ಕಲೆ ಹಾಕಿದರು. ವ್ಯಕ್ತಿಯ ಆಹಾರ ಪದ್ಧತಿ, ಜೀವನ ಶೈಲಿ, ಆರೋಗ್ಯ ಸ್ಥಿತಿಗತಿ ಬಗ್ಗೆ ವಿವರ ಪಡೆಯುತ್ತಿದ್ದಾರೆ. ಇದೇ ರೀತಿ ಸಾವನ್ನಪ್ಪಿರುವ ಎಲ್ಲರ ಮನೆಗಳಿಗೂ ವೈದ್ಯರು ಭೇಟಿ ನೀಡಲಿದ್ದಾರೆ. ತಂಡದಲ್ಲಿ ಡಿಎಚ್ಒ ಡಾ. ಅನಿಲ್, ಆರ್‌ಸಿಹೆಚ್ ಅಧಿಕಾರಿ ಡಾ. ಚೇತನ್, ಔಷಧಿ ವಿಭಾಗದ ಡಾ. ಬಿಂದು ಮತ್ತಿತರರಿದ್ದಾರೆ.



### ಮಾಹಿತಿ ಸಂಗ್ರಹ

ಐದು ಜನ 20ರ ಹರೆಯದವರು ಮೃತಪಟ್ಟಿರುವುದು ಆತಂಕಕ್ಕೆ ಕಾರಣವಾಗಿದ್ದು, 9 ಜನರ ಸಾವಿನ ಸತ್ಯಾಸತ್ಯತೆ ಅರಿಯಲು ಸ್ಥಳೀಯ ವೈದ್ಯಕೀಯ ತಂಡ ಈಗಾಗಲೇ ಕಾರ್ಯಪ್ರವೃತ್ತವಾಗಿದೆ. ಚಿಕ್ಕವಯಸ್ಸಿನವರು ಹೃದಯಾಘಾತದಿಂದ ಮೃತಪಟ್ಟಿರುವ ಕುರಿತು ಮರಣೋತ್ತರ ಪರೀಕ್ಷೆಯಿಂದ ವಾಸ್ತವಾಂಶ ತಿಳಿಯಬಹುದಾಗಿದೆ ಎನ್ನುತ್ತಾರೆ ವೈದ್ಯರು. ಆದರೆ ಪೋಷಕರು ಸಮ್ಮತಿಸುವುದು ಅಷ್ಟು ಸುಲಭದ ಕೆಲಸವಲ್ಲ ಹೀಗಾಗಿ ನಿಖರ ಕಾರಣ ತಿಳಿಯುವುದು ಕಷ್ಟವಾಗುತ್ತಿದೆ ಎನ್ನುತ್ತಾರೆ.

### ನಾಲ್ಕು ದಿನಗಳಲ್ಲಿ ತನಿಖಾ ತಂಡ

ಹೃದಯ ಸ್ತಂಭನದಿಂದ ಸರಣಿ ಸಾವಿನ ಪ್ರಕರಣದ ಹಿನ್ನೆಲೆಯಲ್ಲಿ ಗುಪ್ತಚರ ಇಲಾಖೆ ಮಾಹಿತಿ ಸಂಗ್ರಹಕ್ಕೆ ಮುಂದಾಗಿದ್ದು, ನಿಖರ ಕಾರಣ ಪತ್ತೆಗೆ ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ರವೀಂದ್ರನಾಥ್ ನೇತೃತ್ವದ ತಂಡ ನಾಲ್ಕು ದಿನದಲ್ಲಿ ಜಿಲ್ಲೆಗೆ ಆಗಮಿಸಲಿದೆ.

### ಹೃದಯಾಘಾತ: ವ್ಯಕ್ತಿ ಸಾವು



ಹಾಸನ: ಹೃದಯಾಘಾತದಿಂದ ಬುಧವಾರ ಮತ್ತೊಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ. ತಾಲ್ಲೂಕಿನ ಮುಟ್ಟನಹಳ್ಳಿ ಗ್ರಾಮದ ಸಣ್ಣಪ್ಪಶೆಟ್ಟಿ (52) ಮೃತರು.

ಮನೆಯ ಮುಂದೆ ಕುಳಿತಿದ್ದಾಗ ಏಕಾಏಕಿ ಎದೆನೋವು ಕಾಣಿಸಿಕೊಂಡಿದೆ. ಕುಟುಂಬಸ್ಥರು ಅಂಬುಲೆನ್ಸ್‌ಗೆ ಕರೆ ಮಾಡಿದ್ದರಾದರೂ ವಾಹನ ಬರುವಷ್ಟರಲ್ಲಿ ವ್ಯಕ್ತಿ ಅಸುನೀಗಿದ್ದರು.

### ತಜ್ಞರ ಸಮಿತಿ ಸಭೆ

ಕೋವಿಡ್ ಲಸಿಕೆ ಅಡ್ಡಪರಿಣಾಮ ಸಾವಿಗೀಡಾದವರ ಬಗ್ಗೆ ಅಧ್ಯಯನ ನಡೆಸಲು ಸರ್ಕಾರ ರಚಿಸಿರುವ ತಜ್ಞರ ಸಮಿತಿ ಶ್ವಾಸಕೋಶಕ್ಕೆ ಸಂಬಂಧಿಸಿದ ಕಾರಣಗಳ ಬಗ್ಗೆ ವರದಿಗಳ ಬಗ್ಗೆ ಜು.1 ರಂದು ಬೆಂಗಳೂರು ಜಯದೇವ, ಆರೋಗ್ಯಸೌಧ ಎಚ್‌ಎಫ್‌ಡಬ್ಲ್ಯು ನಿರ್ದೇಶಕರು, ರಾಜೀವ್‌ಗಾಂಧಿ ಎದೆರೋಗ ಸಂಸ್ಥೆ ಬೆಂಗಳೂರು, ನಿಮ್ಹಾನ್ಸ್, ಸೆಂಟ್‌ಜಾನ್ ಶ್ವಾಸಕೋಶ ವಿಭಾಗದ ಮುಖ್ಯಸ್ಥರು ಹಾಗೂ ಜಿಲ್ಲೆಯ ವೈದ್ಯಕೀಯ ಅಧಿಕಾರಿಗಳ ಜತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚರ್ಚೆ ನಡೆಸಿದೆ.

ಕಳೆದ ಒಂದು ತಿಂಗಳಿಂದ ನಿರಂತರವಾಗಿ ಹೃದಯಾಘಾತ ಸಾವು ಪ್ರಕರಣ ಜಿಲ್ಲೆಯಲ್ಲಿ ಮಾತ್ರವಲ್ಲ ರಾಜ್ಯಾದ್ಯಂತ ಸಾಕಷ್ಟು ಸಂಚಲನ ಸೃಷ್ಟಿಸಿದೆ. ಸರ್ಕಾರ ಈಗಾಗಲೇ ಮುನ್ನೆಚ್ಚರಿಕೆ ವಹಿಸಿದ್ದರೂ, ತಜ್ಞರ ತಂಡ ನೀಡುವ ವರದಿಯಿಂದ ನಿಖರ ಕಾರಣ ತಿಳಿಯಬೇಕಿದೆ.

# ಹಾಸನದಲ್ಲಿ ಇಂದಿನಿಂದ ಹಲಸು-ಮಾವು ಮೇಳ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಶ್ರೀ ಬಾಲಾಜಿ ಇವೆಂಟ್ಸ್ ವತಿಯಿಂದ ಕರಕುಶಲ ಮತ್ತು ಗೃಹೋಪಯೋಗಿ ವಸ್ತುಗಳ ಮಾರಾಟ ಮೇಳ ಹಾಗೂ ಹಲಸು ಮತ್ತು ಮಾವು ಮೇಳವನ್ನು ಜುಲೈ 3 ರಿಂದ 7ರ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಇವೆಂಟ್ ವ್ಯವಸ್ಥಾಪಕ ನವೀನ್ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಬುಧವಾರ ಮಾತನಾಡಿ, ಗುರುವಾರ ಸಂಜೆ 4 ಗಂಟೆಗೆ ಶಾಸಕ ಹೆಚ್.ಪಿ. ಸ್ವರೂಪ್ ಮೇಳವನ್ನು ಉದ್ಘಾಟನೆ ಮಾಡಲಿದ್ದಾರೆ. ಮಹಾನಗರ ಪಾಲಿಕೆ ಮೇಯರ್ ಎಂ.ಚಂದ್ರೇಗೌಡ ಅಧ್ಯಕ್ಷತೆ ವಹಿಸುವರು. ಜಿಪಂ ಸಿಇಒ ಬಿ.ಆರ್.ಪೂರ್ಣಿಮಾ ಕರಕುಶಲ ಮೇಳ ಉದ್ಘಾಟಿಸುವರು ಎಂದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಅವರೂ ಮೇಳದಲ್ಲಿ ಭಾಗಿಯಾಗಿರುವರು. ಈ ವಸ್ತು ಪ್ರದರ್ಶನದಲ್ಲಿ ಹಲವು ರೀತಿಯ ಮಾವು, ಹಲಸಿನಹಣ್ಣು ಹಾಗೂ ಕರಕುಶಲ ವಸ್ತುಗಳು ಮತ್ತು ಗೃಹೋಪಯೋಗಿ ವಸ್ತುಗಳು ಮಾರುಕಟ್ಟೆಗಿಂತ ಕಡಿಮೆ ದರದಲ್ಲಿ ದೊರೆಯುತ್ತವೆ ಹಾಗೂ ಅನೇಕ ಬಗೆಯ ತಿನಿಸುಗಳು ಸಹ ಲಭ್ಯವಾಗುತ್ತವೆ. ವಿವಿಧ ಜಾತಿಯ ಗಿಡಗಳ ಮಾರಾಟ ಮತ್ತು ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಪತ್ರಕರ್ತ ಮಂಜು ಬನವಾಸೆ ಮಾತನಾಡಿ, ಹಲಸಿನ ಹಣ್ಣಿಗೆ ಇಂದು ಬಹುಬೇಡಿಕೆ ಇದೆ. ಇದೇ ಕಾರಣಕ್ಕೆ ಹೊರಗಡೆಗೆ ರಫ್ತಾಗುತ್ತಿದೆ. ಆದರೆ ಹಲಸಿನ ಹಣ್ಣಿನ ಮಹತ್ವ ಹಾಗೂ ವಿವಿಧ ತಳಿಗಳ ಬಗ್ಗೆ ನಮ್ಮವರಿಗೂ ಪರಿಚಯ ಮಾಡಿಕೊಡುವ ಉದ್ದೇಶದಿಂದ ಮೇಳ ಆಯೋಜಿಸಲಾಗಿದೆ ಎಂದರು. ಹಲಸಿನ ಸ್ವಸಹಾಯ ಸಂಘಗಳೂ ಭಾಗಿಯಾಗಲಿವೆ. ಒಂದೂವರೆ ವರ್ಷದಲ್ಲೇ ಹಣ್ಣು ಕೊಡುವ ಹಲಸಿನ ಹಣ್ಣಿನ ಗಿಡಗಳನ್ನೂ ಮೇಳದಲ್ಲಿ ಮಾರಾಟ ಮಾಡಲಾಗುವುದು ಎಂದರು. ಮುಖ್ಯವಾಗಿ ಹಲಸಿನ ಜಿಲೇಬಿ, ಹಲಸಿನ ಬಡಕಿನಿಂದ ವಿವಿಧ ತಿಂಡಿ, ತಿನಿಸುಗಳನ್ನೂ ಮಾರಾಟ ಮಾಡಲಾಗುವುದು. ಎಲ್ಲರೂ ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು. ಮಕ್ಕಳಿಗಾಗಿ ವಿವಿಧ ಆಟೋಟ ಹಾಗೂ ಗೇಮ್ಸ್ ಆಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಪತ್ರಕರ್ತ ಹೆತ್ತೂರು ನಾಗರಾಜು ಮಾತನಾಡಿ, ಇದೇ ಮೊದಲ ಬಾರಿಗೆ ಆಯೋಜಿಸಿರುವ ಮೇಳಕ್ಕೆ ಎಲ್ಲರೂ ಸಹಕಾರ ನೀಡಿ ಎಂದು ವಿನಂತಿಸಿದರು.

ಪತ್ರಿಕಾಗೋಷ್ಟಿಯಲ್ಲಿ ಅಭಿಷೇಕ್, ಪ್ರೇಮ್ ಇದ್ದರು.

# ಕರಾವಳಿಯಲ್ಲಿ ಶಾಂತಿ ಸ್ಥಾಪನೆಗಾಗಿ ಸರ್ಕಾರಕ್ಕೆ ಮನವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕರಾವಳಿಯಲ್ಲಿ ಹೆಚ್ಚುತ್ತಿರುವ ಕೋಮು ಹಿಂಸಾಚಾರ ತಡೆಗಟ್ಟಲು, ದ್ವೇಷ ಹರಡುವ ದುಷ್ಟ ಶಕ್ತಿಗಳ ಕಡಿವಾಣಕ್ಕೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸೌಹಾರ್ದ ಕರ್ನಾಟಕ ವತಿಯಿಂದ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಬುಧವಾರ ಮನವಿ ಸಲ್ಲಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತೀಯ ದ್ವೇಷದ ಕೊಲೆ - ಪ್ರತಿ ಕೊಲೆಗಳು ಭುಗಿಲೆದ್ದಿದೆ. ಒಂದು ತಿಂಗಳ ಅವಧಿಯಲ್ಲಿ 4 ಕೊಲೆಗಳು ನಡೆದಿರುವುದು ಆತಂಕದ ಬೆಳವಣಿಗೆ. ಆಟೋ ಚಾಲಕ ಮುಹಮ್ಮದ್ ಶರೀಫ್, ಅಶ್ರಫ್ ವಯನಾಡು, ಸುಹಾಸ್ ಶೆಟ್ಟಿ, ಅಬ್ದುಲ್ ರೆಹಮಾನ್ ಹೀಗೆ ಸಾಲು ಸಾಲು ಕೊಲೆಗಳು ಕರಾವಳಿ ಮಾತ್ರವಲ್ಲದೆ ಇಡೀ ರಾಜ್ಯದಲ್ಲಿ ಭೀತಿ ಉಂಟುಮಾಡಿವೆ.

ಕಳೆದ 2 ದಶಕಕ್ಕೂ ಹೆಚ್ಚು ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಸರಣಿ ಕೊಲೆಗಳು ಪ್ರತೀಕಾರದ ನೆಪದಲ್ಲಿ ನಡೆಯುತ್ತಲೇ ಬಂದಿವೆ. ಅಮಾಯಕರು ಈ ರೀತಿಯ ಹತ್ಯೆಗಳಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಅವಧಿಯಲ್ಲಿ ಅದು ಮತ್ತಷ್ಟು ವೇಗ ಪಡೆದುಕೊಂಡಿರುವುದು ಇಡೀ ಕರಾವಳಿಯನ್ನು ಪ್ರಕ್ಷುಬ್ದ ಪ್ರದೇಶವನ್ನಾಗಿ ಪರಿವರ್ತಿಸಿದೆ.



ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ನಡೆಯುತ್ತಿರುವ ಕೊಲೆ, ಪ್ರತಿ ಕೊಲೆ ಹಾಗೂ ಅದರ ಸುತ್ತಲಿನ ಬೆಳವಣಿಗೆಗಳು ಅಲ್ಲಿನ ಜನ ಸಮುದಾಯಗಳನ್ನು ಧರ್ಮದ ಆಧಾರದಲ್ಲಿ ಪೂರ್ತಿಯಾಗಿ ವಿಭಜಿಸಿ ಹಾಕಿದೆ. ಇದು ಅತ್ಯಂತ ಗಂಭೀರ ಸ್ಥಿತಿಯಾಗಿದ್ದು, ಇದರ ಪರಿಣಾಮಗಳು ರಾಜ್ಯ ಇತರೆಡೆಗಳಲ್ಲೂ ನಿಧಾನವಾಗಿ ಗೋಚರಿಸತೊಡಗಿದೆ ಎಂದರು.

ಕರಾವಳಿ ಜಿಲ್ಲೆಗಳಲ್ಲಿ ಕೋಮುವಾದದ ವಿಷಜ್ವಾಲೆ ತೀವ್ರವಾಗುತ್ತಿರುವುದರಿಂದ ತಕ್ಷಣವೇ ಇದನ್ನು ಮತೀಯವಾದ ಉಲ್ಬಣಗೊಂಡಿರುವ ರೆಡ್ ಝೋನ್ ಎಂದು ಘೋಷಿಸಬೇಕು. ಕುಡುಪು ಗುಂಪು ಹತ್ಯೆ ಪ್ರಕರಣವನ್ನು ವಿಶೇಷ ತನಿಖಾ ತಂಡದ ಮೂಲಕ ಹೊಸ ಎಫ್‌ಐಆರ್ ದಾಖಲಿಸಿ ಮರು ತನಿಖೆ ನಡೆಸಬೇಕು.

ಈ ಅವಧಿಯಲ್ಲಿ ಮತೀಯ ದ್ವೇಷದಿಂದ ಹತ್ಯೆಗೀಡಾದ ಅಮಾಯಕರ ಕುಟುಂಬಗಳಿಗೆ ಪರಿಹಾರ ಧನ ಸಹಾಯ ಮಾಡಿ ಪುನರ್ವಸತಿ ಕಲ್ಪಿಸಿಕೊಡಬೇಕು.

ಕರಾವಳಿ ಜಿಲ್ಲೆಗಳಲ್ಲಿ ದ್ವೇಷ ಭಾಷಣ, ಪ್ರತೀಕಾರದ ಕರೆ ನೀಡುವ ವ್ಯಕ್ತಿಗಳ ಮೇಲೆ ಸರ್ಕಾರ ಯಾವುದೇ ಮುಲಾಜಿಲ್ಲದೆ ನಿರ್ದಾಕ್ಷಿಣ್ಯ ಕಾನೂನು ಕ್ರಮ ಕೈಗೊಳ್ಳಬೇಕು, ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಆರೋಪಿಗಳಿಗೆ ಸುಲಭದಲ್ಲಿ ಜಾಮೀನು, ತಡೆಯಾಜ್ಞೆ ದೊರಕದಂತೆ ನೋಡಲು ಪ್ರತ್ಯೇಕವಾಗಿ ವಿಶೇಷ ಅಭಿಯೋಕರನ್ನು ನೇಮಿಬೇಕು ಎಂದು ಮನವಿ ಮಾಡಿದರು.

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಕೋಮುವಾದ ಪ್ರೇರಿತ ಕೊಲೆ, ಪ್ರತಿಕೊಲೆಗಳನ್ನು ಎಸ್.ಐ.ಟಿ ಮೂಲಕ ಮರು ತನಿಖೆಗೆ ಒಳಪಡಿಸಬೇಕು.

ಈ ವೇಳೆ ಲೇಖಕಿ ರೂಪಾ ಹಾಸನ, ಹಿರಿಯ ಪತ್ರಕರ್ತ ಆರ್.ಪಿ ವೆಂಕಟೇಶ್ ಮೂರ್ತಿ, ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ದಲಿತ ಮುಖಂಡ ಎಚ್.ಕೆ. ಸಂದೇಶ್, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಎಚ್.ಆರ್ ನವೀನ್ ಕುಮಾರ್, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಪೃಥ್ವಿ ಎಂ.ಜಿ, ರಾಜಶೇಖರ್ ಹುಲಿಕಲ್, ಟಿ.ಆರ್ ವಿಜಯ್ ಕುಮಾರ್ ಇದ್ದರು.

# ಜೈನ ಸಮಾಜದ ಸೇವಾ ಕಾರ್ಯ ಶ್ಲಾಘನೀಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಜೈನ ಸಮಾಜದ ಸೇವಾ ಕಾರ್ಯಗಳು ಶ್ಲಾಘನೀಯವಾದುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಅಶೋಕ ರಸ್ತೆಯ ಕುಂಥುನಾಥ್ ಜೈನ ದೇವಸ್ಥಾನ ಆವರಣದಲ್ಲಿ ಎಸ್.ಪಿ. ಓಸ್ವಾಲ್ ಅಂಡ್ ಕೋ ವತಿಯಿಂದ ನಿರ್ಮಾಣ ಮಾಡಿರುವ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಜೈನ್ ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಜನ ಸಾಮಾನ್ಯರ ಅನುಕೂಲಕ್ಕಾಗಿ ಎಸ್.ಪಿ. ಓಸ್ವಾಲ್ ಅಂಡ್ ಕೋ ಅವರ ಕುಟುಂಬದವರು ಕುಡಿಯುವ ನೀರಿನ ಘಟಕವನ್ನು ನಿರ್ಮಾಣ ಮಾಡಿರುವುದು ಶ್ಲಾಘನೀಯ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ಮೊದಲ ಬಾರಿಗೆ ಪ್ರಧಾನಿಯಾದಾಗ ದೇಶಾದ್ಯಾಂತ ಶೌಚಾಲಯಗಳ ನಿರ್ಮಾಣಕ್ಕೆ ಆದ್ಯತೆ ನೀಡಿದರು.




ಇದೀಗ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರನ್ನು ನೀಡಬೇಕೆಂಬ ನಿಟ್ಟಿನಲ್ಲಿ ಜಲಜೀವನ್ ಮಿಷನ್ ಯೋಜನೆಯನ್ನು ಜಾರಿಗೆ ತಂದಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ಜಲಜೀವನ್ ಮಿಷನ್‌ನಡಿ ಹಲವೆಡೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಪಟ್ಟಣದ ಜನರ ಅನುಕೂಲಕ್ಕಾಗಿ 10 ಕೋಟಿ ರೂ. ವೆಚ್ಚದಲ್ಲಿ ಫಿಲ್ಟರ್ ಹೌಸ್ ಆಧುನಿಕೀಕರಣ ಮಾಡಲಾಗುತ್ತಿದ್ದು, ಶೀಘ್ರದಲ್ಲಿ ಶುದ್ಧ ಕುಡಿಯುವ ನೀರು ಪಟ್ಟಣದಲ್ಲಿ ಲಭ್ಯವಾಗಲಿದೆ. ಇಂದು ಇಂತಹ ಪುಣ್ಯಕಾರ್ಯಕ್ಕೆ ಚಾಲನೆ ನೀಡುವುದು ನನ್ನ ಭಾಗ್ಯ ಎಂದು ತಿಳಿಸಿದರು.

ಪುರಸಭಾ ಅಧ್ಯಕ್ಷೆ ಜ್ಯೋತಿ ರಾಜಕುಮಾರ್ ಮಾತನಾಡಿ, ಜೈನ ಸಮಾಜವು ನನ್ನನ್ನು ಮಗಳಂತೆ ಕಂಡಿದೆ. ಜೈನ ಪಂಥದ ಉಪವಾಸವು ಕೇವಲ ಆಹಾರದ ತ್ಯಾಗವಲ್ಲ, ಅದು ಮಾನವೀಯತೆ ಮತ್ತು ಶಾಂತಿಯ ಪ್ರತಿರೂಪವಾಗಿದೆ. ಶುದ್ಧ ಕುಡಿಯುವ ನೀರಿನ ಘಟಕದಿಂದ ಜನ ಸಾಮಾನ್ಯರಿಗೆ ಬಹಳ ಅನುಕೂಲವಾಗುತ್ತದೆ ಎಂದರು. ಪಟ್ಟಣ ಪುರಸಭೆಯ ಸಭೆಯಲ್ಲಿ ಸಕಲೇಶಪುರದ ಹಲವು ವಾರ್ಡ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲು ಚರ್ಚೆ ನಡೆದಿತ್ತು ಸರಕಾರವನ್ನು ಅವಲಂಬಿಸದೆ ಇಂದು ಜೈನ್ ಸಂಬಂದವರು ಸಾರ್ವಜನಿಕರಿಗಾಗಿ ಕುಡಿಯುವ ನೀರಿನ ಘಟಕವನ್ನು ಲೋಕಾರ್ಪಣೆ ಮಾಡಿರುವುದು ಸಂತಸ ತಂದಿದೆ ಎಂದು ಹೇಳಿದರು.

ಈಗ ಶುದ್ಧ ಕುಡಿಯುವ ನೀರಿನ ಘಟಕದಿಂದ ಬ್ರಾಹ್ಮಣರ ಬೀದಿ, ಆಜಾದ್ ರಸ್ತೆ ವಿನೋಬ ರಸ್ತೆ ಜನರಿಗೆ ತುಂಬಾ ಅನುಕೂಲವಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಸ್.ಪಿ. ಓಸ್ವಾಲ್ ಕುಟುಂಬದವರನ್ನು ಸನ್ಮಾನಿಸಲಾಯಿತು.

ಶುದ್ಧ ಕುಡಿಯುವ ನೀರಿನ ಘಟಕದ ದಾನಿಗಳಾದ ಪ್ರವೀಣ್ ಜೈನ್, ಭರತ್ ಜೈನ್, ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ, ಪುರಸಭಾ ಸದಸ್ಯರಾದ ವನಜಾಕ್ಷಿ, ವಿದ್ಯಾ, ಜೈನ ಸಮಾಜದ ಮುಖಂಡರಾದ ಸಂತೋಷ್ ಜೈನ್, ವಿಜಯ್ ಕುಮಾರ್ ಜೈನ್, ದಿನೇಶ್ ಕುಮಾರ್ ಜೈನ್, ಮಂಗಳ0, ವಿನೋದ್, ಪ್ರವೀಣ್ ಮತ್ತಿತರರು ಹಾಜರಿದ್ದರು.

# ಜನಪ್ರಿಯ ಆಸ್ಪತ್ರೆಯಲ್ಲಿ ವೈದ್ಯರ ದಿನಾಚರಣೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅನಾರೋಗ್ಯ ಸಮಸ್ಯೆಯಿಂದ ಆಸ್ಪತ್ರೆಗೆ ಬರುವ ಜನರನ್ನು ಪ್ರೀತಿ ಮತ್ತು ಮಾನವೀಯತೆಯಿಂದ ಕಾಣುವುದು ವೈದ್ಯರ ಕರ್ತವ್ಯ ಎಂದು ಜನಪ್ರಿಯ ಆಸ್ಪತ್ರೆ ಮುಖ್ಯಸ್ಥ ಡಾ. ವಿ.ಕೆ. ಅಬ್ದುಲ್ ಬಶೀರ್ ಹೇಳಿದರು.

ಆಸ್ಪತ್ರೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆಯಲ್ಲಿ ಮಾತನಾಡಿ, ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಹಾಗು ಖ್ಯಾತ ವೈದ್ಯ ಡಾ. ಬಿಧನ್ ಚಂದ್ರ ರಾಯ್ ಅವರ ಜನ್ಮದಿನೋತ್ಸವ ಅಂಗವಾಗಿ ಪ್ರತಿವರ್ಷ ಜು. 1 ರಂದು ವೈದ್ಯರ ದಿನವಾಗಿ ಆಚರಿಸಲಾಗುತ್ತದೆ. ಡಾ. ಬಿ.ಸಿ. ರಾಯ್ ಅವರು ಸಮಾಜದ ಏಳಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಸಾಧನೆಯನ್ನು ಗುರುತಿಸಿ 1961ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಗೌರವ ಭಾರತ ರತ್ನ ನೀಡಲಾಗಿತ್ತು ಎಂದರು.

ರೋಗಿಗಳಿಗೆ ವೈದ್ಯರೇ ದೇವರು. ಅದೇ ರೀತಿ ವೈದ್ಯರಿಗೂ ರೋಗಿಗಳೇ ದೇವರು. ರೋಗಿಗಳನ್ನು ಪ್ರೀತಿಯಿಂದ ಕಾಣುವುದು ಜವಾಬ್ದಾರಿ. ಖಾಯಿಲೆ ಗುಣವಾಗುತ್ತದೆ ಎಂಬ ನಂಬಿಕೆಯಿಂದ ನಮ್ಮ ಬಳಿಗೆ ಜನರು ಬರುತ್ತಾರೆ. ಆದ್ದರಿಂದ ಮಾನವೀಯತೆಯಿಂದ ಜವಾಬ್ದಾರಿ ನಿರ್ವಹಿಸಬೇಕೆಂದರು.

ಹಿರಿಯ ವೈದ್ಯ ಡಾ. ರಾಂ ಸ್ವರೂಪ್ ಅವರು ಮಾತನಾಡಿ, ವೈದ್ಯರು ರೋಗಿಗಳಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಬೇಕು. ನಾವೆಲ್ಲರೂ 24/7 ಸೇವೆ ನೀಡಲು ಸಿದ್ಧವಿರಬೇಕು. ವೈದ್ಯರು ರೋಗಿಗಳನ್ನು ಪ್ರೀತಿಯಿಂದ ಮತ್ತು ಸೇವಾ ಮನೋಭಾವದಿಂದ ಕಾಣಬೇಕು. ಜಿಲ್ಲೆಯಲ್ಲಿ ಡಾ.ಬಶೀರ್ ಅವರ ನೇತೃತ್ವದಲ್ಲಿ ಜನಪ್ರಿಯ ಆಸ್ಪತ್ರೆ ಆರೋಗ್ಯ ಕ್ಷೇತ್ರದಲ್ಲಿ ಒಳ್ಳೆಯ ಸೇವೆ ನೀಡುತ್ತಿದೆ ಎಂದು ಹೇಳಿದರು.


ಡಾ. ರಾಂ ಸ್ವರೂಪ್ ಅವರನ್ನು ಸನ್ಮಾನಿಸಲಾಯಿತು.

# ಬಾರ್‌ಗೆ ಅನುಮತಿ ಖಂಡಿಸಿ ಬೀದಿಗಿಳಿದ ಮಹಿಳೆಯರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ತಾಲ್ಲೂಕಿನ ಮಳಲಿ ಗ್ರಾಮದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಅವಕಾಶ ಕಲ್ಪಿಸಬಾರದೆಂದು ಆಗ್ರಹಿಸಿ ಗ್ರಾಮದ ಮಹಿಳೆಯರು ಬುಧವಾರ ಗ್ರಾಮ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದೇ ಒಂದು ಮದ್ಯದಂಗಡಿ ಇಲ್ಲ. ಗ್ರಾಮಸ್ಥರೆಲ್ಲರೂ ಒಟ್ಟಾಗಿ ಮದ್ಯದಂಗಡಿ ವಿರುದ್ಧ ಹೋರಾಟ ನಡೆಸಿದ್ದರಿಂದ ಮದ್ಯದಂಗಡಿ ತೆರೆಯಲು ಬಿಟ್ಟಿಲ್ಲ. ಈಗ ಹೊಳೆನರಸೀಪುರ ರಸ್ತೆಯ ಪರಸನಹಳ್ಳಿ ವ್ಯಾಪ್ತಿಯಲ್ಲಿ ಹೊಸದಾಗಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಗ್ರಾಮ ಪಂಚಾಯಿತಿ ಅನುಮತಿ ನೀಡಿದೆ. ಇದು ಗ್ರಾಮದಲ್ಲಿ ಅಶಾಂತಿಗೆ ಕಾರಣವಾಗುತ್ತದೆ. ಯಾವ ಕಾರಣಕ್ಕೂ ಅಧಿಕಾರಿಗಳು ಬಾರ್‌ಗೆ ಅವಕಾಶ ಕಲ್ಪಿಸಬಾರದು ಎಂದು ಆಗ್ರಹಿಸಿದರು.




ಗ್ರಾಮದ ಎಲ್ಲರೂ ಕೂಲಿ ಕೆಲಸವನ್ನೇ ನಂಬಿಕೊಂಡಿದ್ದು ಹೊತ್ತಿನ ಊಟಕ್ಕೂ ಪರದಾಡುತ್ತಿದ್ದೇವೆ. ಬಾರ್ ತೆರೆದರೆ ಪುರುಷರು ನಿತ್ಯ ಕುಡಿತದ ಚಟಕ್ಕೆ ದಾಸರಾಗುತ್ತಾರೆ. ಅದರಿಂದ ಗ್ರಾಮದಲ್ಲಿ ಶಾಂತಿಗೆ ಭಂಗವುಂಟಾಗುತ್ತದೆ. ಯಾರದೋ ಹಿತಾಸಕ್ತಿ ಕಾಪಾಡಲು ಜಿಲ್ಲಾಡಳಿತ ಬಾರ್‌ಗೆ ಅನುಮತಿ ನೀಡಿದರೆ ಭಾರೀ ಸಮಸ್ಯೆಯಾಗುತ್ತದೆ. ಮದ್ಯ ಸೇವನೆಯಿಂದ ಆರೋಗ್ಯ ಮತ್ತು ಹಣ ಎರಡೂ ವ್ಯಯವಾಗುತ್ತದೆ. ಜಿಲ್ಲಾಡಳಿತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಒಂದು ವೇಳೆ ಬಾರ್ ಅಂಡ್ ರೆಸ್ಟೋರೆಂಟ್ ನಿರ್ಮಾಣಕ್ಕೆ ಅನುಮತಿ ನೀಡಿದರೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

# ಲಾರಿ ಚಾಲಕನಿಗೆ ಯುವಕನ ಧಮ್ಕಿ


ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಓವರ್‌ಟೇಕ್ ಮಾಡಲು ಅವಕಾಶ ಮಾಡಿಕೊಡಲಿಲ್ಲವೆಂದು ಕಾರಿನಲ್ಲಿ ಚಲಿಸುತ್ತಿದ್ದ ಯುವಕನೊಬ್ಬ ಲಾಠಿ ಹಿಡಿದು ಧಮ್ಕಿ ಹಾಕಿರುವ ಘಟನೆ ಬಾಳ್ಳುಪೇಟೆಯಲ್ಲಿ ನಡೆದಿದೆ.

ಧೀರಜ್ ಆರೋಪಿ. ಗ್ರಾಮಾಂತರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಒಂದು ಬಾರಿ ಲಾಠಿಯಿಂದ ಲಾರಿ ಮುಂಭಾಗದ ಗಾಜಿಗೆ ಹೊಡೆದಿದ್ದಾನೆ. ಯುವಕನ ಕೈಯಲ್ಲಿ ಇದ್ದುದು ಪೊಲೀಸರು ಬಳಸುವ ಲಾಠಿ ಎನ್ನಲಾಗಿದೆ. ಸ್ವಲ್ಪ ದೂರ ಪುಂಡಾಟ ಮೆರೆದು ಲಾರಿಯನ್ನು ಓವರ್ ಟೇಕ್ ಮಾಡಿ ಅಡ್ಡಗಟ್ಟಿದ ಧೀರಜ್ ಲಾರಿ ಚಾಲಕ ಮಹಮ್ಮದ್ ನಿಶಾನ್ ಅವರನ್ನು ಕೆಳಗಿಳಿಸಿ ಹಲ್ಲೆ ನಡೆಸಿದ್ದಾನೆ. ಅವರು ಆತನಿಂದ ತಪ್ಪಿಸಿಕೊಳ್ಳಲು ಪಕ್ಕದ ಜಮೀನಿಗೆ ಓಡಿ ಹೋಗಿದ್ದಾರೆ. ನಂತರ ಧೀರಜ್ ಕಾರು ಓಡಿಸಿಕೊಂಡು ಹೋಗಿದ್ದ. ಧೀರಜ್‌ನ ಪುಂಡಾಟದ ದೃಶ್ಯವನ್ನು ಲಾರಿಯಲ್ಲಿದ್ದವರು ಮೊಬೈಲ್ ಕ್ಯಾಮರಾದಲ್ಲಿ ವಿಡಿಯೋ ಮಾಡಿಕೊಂಡಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ವೈರಲ್ ಆಗುತ್ತಿದ್ದಂತೆ ಪೊಲೀಸರು ಧೀರಜ್‌ನನ್ನು ಬಂಧಿಸಿದ್ದಾರೆ.



# ಹಿರೀಸಾವೆ ಗ್ರಾಪಂಗೆ ಜಯಮ್ಮ ಬೋರಯ್ಯ ಅಧ್ಯಕ್ಷೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜಯಮ್ಮ ಬೋರಯ್ಯ ಬುಧವಾರ ಅವಿರೋಧ ಆಯ್ಕೆಯಾದರು.

ನೂತನ ಅಧ್ಯಕ್ಷೆ ಜಯಮ್ಮ ಬೋರಯ್ಯ ಮಾತನಾಡಿ, ಎಲ್ಲ ಸದಸ್ಯರ ಸಹಕಾರ ಪಡೆದು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಹಾಗೂ ಪಟ್ಟಣದ ಅಭಿವೃದ್ಧಿಗೆ ಶ್ರಮಿಸಲಾಗುವುದು. ಕುಡಿಯುವ ನೀರು, ಚರಂಡಿ ಸ್ವಚ್ಛತೆ ಹಾಗೂ ಬೀದಿದೀಪ ನಿರ್ವಹಣೆ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ಹಿರೀಸಾವೆ ಗ್ರಾಮ ಪಂಚಾಯಿತಿ 23 ಸದಸ್ಯರ ಬಲ ಹೊಂದಿದ್ದು 16 ಮಂದಿ ಸದಸ್ಯರು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್.ಹರೀಶ್ ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಜೆ. ಮಹೇಶ್, ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಈ. ಬೋರಣ್ಣ, ಉಪಾಧ್ಯಕ್ಷೆ ವೇದಾವತಿ, ಸದಸ್ಯರಾದ ತುಂಗಲಕ್ಷ್ಮೀ ಮಂಜುನಾಥ್, ಭಾಗ್ಯಮ್ಮ ಮಂಜುನಾಥ್, ಚಂದ್ರಮ್ಮ, ರಾಧಾ ರಾಮೇಗೌಡ, ಕೋಮಲ ನರಸಿಂಹಮೂರ್ತಿ, ಸುನೀತಾ ಬೋರೇಗೌಡ, ಶಂಕರ್, ಬಸವರಾಜ್, ಪರಮೇಶ್, ಪಿಡಿಒ ಕೆ.ಜೆ. ಸತೀಶ್, ಕಾರ್ಯದರ್ಶಿ ಮರಿಗೌಡ ಇತರರಿದ್ದರು.

# ದುಶ್ಚಟ, ಅತಿ ಮೊಬೈಲ್ ಬಳಕೆಯಿಂದ ದೂರವಿರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಆಧುನಿಕ ದಿನಗಳಲ್ಲಿ ಯುವಕರಲ್ಲಿ ಹೃದಯಾಘಾತ ಸಮಸ್ಯೆ ಹೆಚ್ಚಾಗಿ ಕಾಡುತ್ತಿದ್ದು ಅದಕ್ಕೆ ಅತಿಯಾದ ಒತ್ತಡವೇ ಕಾರಣವಾಗಿದೆ ಎಂದು ಹೃದ್ರೋಗ ತಜ್ಞ ಡಾ. ಅನೂಪ್ ತಿಳಿಸಿದರು.

ಪಟ್ಟಣದ ವೈಷ್ಣವ ಘೋಷ್ಟಿಯಲ್ಲಿ ರಾಜ್ಯ ಸ್ಪಂದನ ಸಿರಿ ವೇದಿಕೆ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆಯಲ್ಲಿ ಮಾತನಾಡಿ, 25 ರಿಂದ 40 ವಯಸ್ಸಿನವರಲ್ಲಿ ಹೆಚ್ಚಾಗಿ ಹೃದಯಾಘಾತ ಸಂಭವಿಸಿ ಸಾವನ್ನಪ್ಪುತ್ತಿದ್ದಾರೆ. ಯುವ ಜನಾಂಗದಲ್ಲಿ ದುಶ್ಚಟ ಹೆಚ್ಚಾಗಿದೆ. ಅತಿಯಾದ ಮೊಬೈಲ್ ಬಳಕೆಯೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ವಿದ್ಯಾರ್ಥಿಗಳಿಗೆ ಮಾನಸಿಕವಾಗಿ ಒತ್ತಡ ಹೇರದೆ ಅವರಿಗೆ ಉತ್ತಮ ಆಹಾರ ಪದ್ಧತಿ ರೂಢಿಸಿಕೊಳ್ಳಲು ಸೂಚಿಸಬೇಕು. ಜಂಕ್ ಫುಡ್ ಆಹಾರಗಳನ್ನು ಮೊದಲು ದೂರ ಮಾಡಬೇಕು. ಯುವಕರು ವಿದ್ಯೆಯ ಜೊತೆಗೆ ದೈಹಿಕ ಹಾಗೂ ಮಾನಸಿಕವಾಗಿ



ಸದೃಢರಾಗಲು ದೈಹಿಕ ಶಿಕ್ಷಣದ ಜೊತೆಯಲ್ಲಿ ವ್ಯಾಯಾಮ ಹಾಗೂ ಇನ್ನಿತರ ಆಟೋಟ ಚಟುವಟಿಕೆ ಗಳಲ್ಲಿ ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರತಿನಿತ್ಯ ಸುಮಾರು 8 ಗಂಟೆಗಳ ಕಾಲ ನಿದ್ರೆಗೆ ಅವಕಾಶ ನೀಡಬೇಕು. ಅಂತವರಿಗೆ ಯಾವುದೇ ರೋಗಲಕ್ಷಣ ಕಂಡುಬರುವುದಿಲ್ಲ. ಯಾವುದೇ ಹೃದಯಸ್ತಂಭನ ಸಂದರ್ಭದಲ್ಲಿ ಅವರಿಗೆ ಮೊದಲು ಪ್ರಥಮ ಚಿಕಿತ್ಸೆ ನೀಡುವುದು ಅತಿಮುಖ್ಯ. ಕೆಲವರಲ್ಲಿ ಕೊರೊನ ಸಂದರ್ಭದಲ್ಲಿ ನೀಡಿದ ವ್ಯಾಕ್ಸಿನ್ ನಿಂದಾಗಿ ಹೆಚ್ಚಾಗಿ ಹೃದಯ ಸ್ತಂಭನ ಆಗುತ್ತದೆ ಎಂಬ ತಪ್ಪು ಕಲ್ಪನೆ ಇದೆ ಎಂದು ಹೇಳಿದರು.

ಹಿಮ್ಸ್ ನ ಡಾ. ರವಿ ಹಾಗು ಡಾ. ಹರ್ಷ ಮಾತನಾಡಿ, ಯುವ ಜನಾಂಗದಲ್ಲಿ ಬದಲಾದ ಜೀವನ ಶೈಲಿ ಅಸಮರ್ಪಕ, ಸಂಸ್ಕರಿಸದ ಆಹಾರ ಪದ್ಧತಿಯಿಂದ ಹೃದಯಾಘಾತ ಸಂಭವಿಸುತ್ತಿದೆ.

ನಿದ್ರಾಹೀನತೆ, ಅತಿಯಾದ ಮೊಬೈಲ್ ಬಳಕೆ, ದೀರ್ಘ ಒತ್ತಡ ಸೇರಿದಂತೆ ಇನ್ನಿತರ ಮಾನಸಿಕವಾಗಿ ಒತ್ತಡ ಅನುಭವಿಸಿದಾಗ ಹೃದಯ ಸಂಬಂಧಿ ಕಾಯಿಲೆಗಳು ಉದ್ಭವಿಸುತ್ತವೆ ಎಂದು ತಿಳಿಸಿದರು.

ಕಿಮ್ಸ್ ಆಸ್ಪತ್ರೆಯ ಸಂಶೋಧನೆಯ ಪ್ರಕಾರ ಹದಿಹರೆಯದ ಮಕ್ಕಳಲ್ಲಿ ಹೃದಯಘಾತ ಹೆಚ್ಚಳಕ್ಕೆ ಅತಿಯಾದ ಮೊಬೈಲ್ ಬಳಕೆ ಕಾರಣ ಎಂದು ತಿಳಿದುಬಂದಿದೆ. ಉತ್ತಮ ಆರೋಗ್ಯ ಪದ್ದತಿಯನ್ನು ಆರೋಗ್ಯದಲ್ಲಿ ಅಳವಡಿಸಿಕೊಂಡರೆ ಇಂತಹ ಕಾಯಿಲೆಗಳಿಂದ ದೂರ ಉಳಿಯಬಹುದು ಎಂದರು.

ಕಾಂಗ್ರೆಸ್ ಮುಖಂಡ ಬಿ.ಎಂ. ಸಂತೋಷ್ ಮಾತನಾಡಿ, ಪ್ರತಿನಿತ್ಯ ಸಾರ್ವಜನಿಕರ ಸೇವೆಯಲ್ಲಿ ವೈದ್ಯರ ಪಾತ್ರ ಬಹು ದೊಡ್ಡದಾಗಿದ್ದು ವೈದ್ಯರ ದಿನದಂದು ಅವರನ್ನು ಅಭಿನಂದಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.ಭೂಮಿ ತಾಯಿ ನಮ್ಮನ್ನು ಹೊತ್ತಿ ಸಲವುತ್ತಾಳೆ ಭೂಮಿ ಮೇಲಿರುವ ನಮಗೆ ಪ್ರತಿಯೊಬ್ಬ ಮನುಷ್ಯರಿಗು ಆರೋಗ್ಯದ ಮೂಲಕ ಪ್ರತಿನಿತ್ಯ ನಮ್ಮನ್ನು ಸಲಹುವಂತ ಕೆಲಸ ಮಾಡುವ ವೈದ್ಯರನ್ನು ನೆನೆಯುವ ಕೆಲಸ ಆಗಬೇಕು.

ಸ್ಪಂದನ ಸಿರಿ ವೇದಿಕೆ ಜಿಲ್ಲಾಧ್ಯಕ್ಷೆ ಆಶಾ ಕಿರಣ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ವಸಂತ್ ಕುಮಾರ್, ಆರೋಗ್ಯ ಅಧಿಕಾರಿ ಡಾ. ವಿಜಯ್, ಪತ್ರಕರ್ತರ ಸಂಘದ ಅಧ್ಯಕ್ಷ ರಘುನಾಥ್, ಕೆಡಿಪಿ ಸದಸ್ಯೆ ಸೌಮ್ಯ ಆನಂದ್, ಡಾ. ಶ್ರೀಧರ್, ಡಾ. ರಾಘವೇಂದ್ರ, ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ರವೀಂದ್ರನಾಥ್, ಡಾ. ನಾರಾಯಣಸ್ವಾಮಿ, ಡಾ. ನರಸೇಗೌಡ, ಡಾ. ಚಂದ್ರಮೌಳಿ, ಡಾ. ಸತೀಶ್, ಡಾ. ರಘುಕಿರಣ್, ಡಾ. ಸುಧಾ, ಡಾ. ಮಮತ, ಡಾ. ಅಶ್ವತ್, ವಿನೀಶ್, ನರಸಿಂಹಸ್ವಾಮಿ ಇತರರು ಹಾಜರಿದ್ದರು.

# ಉತ್ತಮ ಬದುಕಿಗೆ ದಂತ ಸಂರಕ್ಷಣೆ ಮುಖ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ವಿದ್ಯೆ ನಮ್ಮ ಬದುಕನ್ನು ವಿಕಾಸಗೊಳಿಸಿದರೆ ಆರೋಗ್ಯ ಪೂರ್ಣ ಜೀವನ ಶೈಲಿ ನಮ್ಮ ಬದುಕು ಸದೃಢವಾಗಿ ಸಾಗುವಂತೆ ಮಾಡುತ್ತದೆ ಎಂದು ದಂತ ವೈದ್ಯೆ ಡಾ. ಹೇಮಾ ಹೇಳಿದರು.

ರೋಟರಿ ಇನ್ನರ್ ವಿಲ್ ಸಂಸ್ಥೆ ವತಿಯಿಂದ ನಗರದ ಕಾಳನಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ವಿದ್ಯಾರ್ಥಿಗಳ ದಂತ ತಪಾಸಣೆ ಹಾಗೂ ಉಚಿತವಾಗಿ ಪೇಸ್ಟ್, ಬ್ರಷ್ ಸೇರಿದಂತೆ ದಂತ ಉಪಶಮನಕ್ಕೆ ಸಂಬಂಧಿಸಿದ ಔಷಧಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮನುಷ್ಯನ ದೇಹದಲ್ಲಿ ಪ್ರತಿಯೊಂದು ಅಂಗವು ಅದರದೇ ಆದ ಪ್ರಾಮುಖ್ಯತೆ ಹೊಂದಿದೆ.

ಅದಕ್ಕೆ ನಮ್ಮ ದಂತ ಹೊರತಾಗಿಲ್ಲ. ಇತರ ಅಂಗಾಂಗಗಳ ಆರೋಗ್ಯವು ನಮ್ಮ ದಂತಗಳ ಮೇಲೆ ಅವಲಂಬಿತವಾಗಿರುತ್ತವೆ. ವಿದ್ಯಾರ್ಥಿಗಳು ಬಾಲ್ಯದಿಂದಲೇ ಇದನ್ನು ಅರಿತು ಹಲ್ಲುಗಳಲ್ಲಿ ಕಾಣಿಸಿಕೊಳ್ಳುವ ತೊಂದರೆಗಳನ್ನು ಆರಂಭದಲ್ಲಿ ಗುಣಪಡಿಸಿಕೊಳ್ಳುವ ಜಾಣ್ಮೆ ಹೊಂದಿದ್ದರೆ



ನಿಮ್ಮ ಭವಿಷ್ಯ ಉತ್ತಮ ಆರೋಗ್ಯದಿಂದ ಕೂಡಿರುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇನ್ನರ್ ವಿಲ್ ಸಂಸ್ಥೆಯ ಅಧ್ಯಕ್ಷೆ ರಂಜಿತಾ ವಿನಯ್ ಮಾತನಾಡಿ, ರೋಟರಿ ಇನ್ನರ್ ವೀಲ್ ಸಂಸ್ಥೆಯು ಸಾಮಾಜಿಕ ಕಳಕಳಿಯೊಂದಿಗೆ ಸಾರ್ವಜನಿಕ, ಆರೋಗ್ಯ, ಶಿಕ್ಷಣ, ಪರಿಸರ ಸೇರಿ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಮೂಲಕ ಸಮಾಜದ ಬೆಳವಣಿಗೆಗೆ ಕೊಡುಗೆ ನೀಡುತ್ತಿದೆ ಎಂದರು.

ಜುಲೈ 4ರಂದು ನಗರದ ಹಾರನಹಳ್ಳಿ ರಾಮಸ್ವಾಮಿ ಸಮುದಾಯ ಭವನದಲ್ಲಿ ಅಲಂಕೃತಿ ಮಹಾ ಮೇಳವನ್ನು ಇನ್ನರ್ ವಿಲ್ ಸಂಸ್ಥೆ ಆಯೋಜಿಸಿದ್ದು ಮೇಳದಿಂದ ಬರುವ ಲಾಭವನ್ನು ಸಂಪೂರ್ಣವಾಗಿ ಅಂಥ ಮಕ್ಕಳ ಕಲ್ಯಾಣಕ್ಕೆ ನೀಡಲಾಗುವುದೆಂದರು.

ರೋಟರಿ ಇನ್ನರ್ ವಿಲ್ ಸಂಸ್ಥೆಯ ಕಾರ್ಯದರ್ಶಿ ರೇಷ್ಮಾ ರೈ, ಖಜಾಂಚಿ ಲಕ್ಷ್ಮಿ ಪ್ರಶಾಂತ್, ಶ್ವೇತ ಅನಿಲ್, ಶ್ವೇತ ಮೋಹನ್ ಇತರರಿದ್ದರು.

# ಮಕ್ಕಳಿಗೆ ಪ್ರಾಮಾಣಿಕತೆ ಕಲಿಸುವ ಸ್ಕೌಟ್ಸ್ ಅಂಡ್ ಗೈಡ್ಸ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಭಾರತ್ ಸ್ಕೌಟ್ಸ್ ಅಂಡ್ ವಿದ್ಯಾರ್ಥಿಗಳಲ್ಲಿ ನಂಬಿಕೆ, ನಿಷ್ಠೆ, ಪ್ರಾಮಾಣಿಕತೆ, ಧೈರ್ಯ, ಕಾಯಕ ನಿಷ್ಠೆ, ಪ್ರಾಣಿ-ಪಕ್ಷಿ-ಪ್ರಕೃತಿ ಪ್ರೀತಿ, ಪರಿಶುದ್ಧತೆ, ಪಾರದರ್ಶಕತೆಗಳಂತಹ ಉದಾತ್ತ ಗುಣಗಳನ್ನು ಬೆಳೆಸುತ್ತದೆ ಅಲ್ಲದೆ ಬದುಕನ್ನು ಉನ್ನತಿಕರಿಸುತ್ತದೆ ಎಂದು ಭೈರಾಪುರದ ಬೆಥಸ್ಥ ಆಂಗ್ಲ ಮಾಧ್ಯಮ ಶಾಲೆ ಪ್ರಾಂಶುಪಾಲೆ ರೀನಾ ಮ್ಯಾಥೀವ್ ತಿಳಿಸಿದರು.

ಹಾಸನ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಸಂಸ್ಥೆ ಹಾಗೂ ಆಲೂರು ಸಂಸ್ಥೆ ವತಿಯಿಂದ ಭೈರಾಪುರದ ಬೆಥಸ್ಥ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏರ್ಪಡಿಸಿದ್ದ ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರ ಉದ್ಘಾಟಿಸಿ ಮಾತನಾಡಿ, ಮಕ್ಕಳಲ್ಲಿ ದೇವರಿಗಾಗಿ, ದೇಶಕ್ಕಾಗಿ ಇತರರಿಗಾಗಿ ಸೇವೆ ಹಾಗೂ ಸ್ವಯಂ ಮೌಲ್ಯಗಳ ವರ್ಧನೆ ಬೆಳೆಸುತ್ತದೆ ಎಂದರು.



ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಹಾಯಕ ಆಯುಕ್ತ ಎಂ. ಬಾಲಕೃಷ್ಣ ಮಾತನಾಡಿ, ಸಮಾಜ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತಲೂ ಸಮಾಜಕ್ಕಾಗಿ, ಈ ನಾಡು-ನುಡಿಗಾಗಿ ನಾನೇನು ಕೊಟ್ಟಿದ್ದೇನೆ ಎನ್ನುವ ಹಿನ್ನೆಲೆಯಲ್ಲಿ ಅನೇಕರು ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ತಂದೆ, ತಾಯಿ, ಗುರು-ಹಿರಿಯರನ್ನು ಗೌರವ ಭಾವದಿಂದ ಕಾಣುವುದು ಇಲ್ಲಿನ ಬಹುಮುಖ್ಯ ಧ್ಯೇಯವಾಗಿದೆ. ಇಲ್ಲಿನ ಮೌಲ್ಯಗಳನ್ನು ಅರಿತು ವಿದ್ಯಾರ್ಥಿಗಳು ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ. ಪ್ರಿಯಾಂಕ ಮಾತನಾಡಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮಕ್ಕಳನ್ನು ಮಾನಸಿಕ ಹಾಗೂ ದೈಹಿಕವಾಗಿ ಸದೃಢಗೊಳಿಸುತ್ತದೆ. ಪಠ್ಯೇತರ ಚಟವಟಿಕೆಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ. ತಾಲ್ಲೂಕು ಹಂತದಲ್ಲಿ 150ಕ್ಕೂ ಹೆಚ್ಚು ಮಕ್ಕಳು ಜಿಲ್ಲಾ ಮಟ್ಟದ ಪರೀಕ್ಷೆಯಲ್ಲಿ ಭಾಗವಹಿಸುತ್ತಿರುವುದು ಶ್ಲಾಘನೀಯ ಎಂದರು.

ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್. ಉಪ್ಪಾರ್, ಖಜಾಂಚಿ ಬಿ.ಎಸ್. ಹಿಮ, ಜಂಟಿ ಕಾರ್ಯದರ್ಶಿ ಎಂ.ಎಲ್. ಎಲಿಜಬೆತ್ ಮಾತನಾಡಿದರು.

ಭೈರಾಪುರದ ಎಸ್.ವಿ. ಪಬ್ಲಿಕ್ ಶಾಲೆಯ ಸ್ಕೌಟ್ಸ್ ಮಾಸ್ಟರ್ ಸತೀಶ್, ಗೈಡ್ ಕ್ಯಾಪ್ಟನ್ ಪೃಥ್ವಿನಿ, ಆಲೂರಿನ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯ ಲೇಡಿ ಸ್ಕೌಟ್ ಮಾಸ್ಟರ್ ಶಕುಂತಲಾ, ಗೈಡ್ ಕ್ಯಾಪ್ಟನ್ ರೋಹಿಣಿ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಲೇಡಿ ಸ್ಕೌಟ್ ಮಾಸ್ಟರ್ ಕಾವ್ಯ, ಮಗ್ಗೆ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಶಾಲೆಯ ಗೈಡ್ ಕ್ಯಾಪ್ಟನ್ ಪುಷ್ಪ, ಬೆಥಸ್ಥ ಆಂಗ್ಲ ಮಾಧ್ಯಮ ಶಾಲೆ ಗೈಡ್ ಕ್ಯಾಪ್ಟನ್ ಶಿಲ್ಪಕೃತಿ ಜಿ.ಕೆ, ಸ್ಕೌಟ್ ಮಾಸ್ಟರ್ ಚಂದ್ರು ಪಿ. ಗೌಡ, ಗೈಡ್ ಕ್ಯಾಪ್ಟನ್‌ಗಳಾದ ಎಚ್.ಎನ್., ಸೌಮ್ಯ ಶೃತಿ ಜಿ.ಎನ್, ಎಂ. ಚಂದ್ರಕಲಾ ಲೇಡಿ ಸ್ಕೌಟ್ ಮಾಸ್ಟರ್ ಬಾನು ಉಪಸ್ಥಿತರಿದ್ದರು.

# ರೈತರ ಮಕ್ಕಳಿಗೆ ಹೆಣ್ಣು ಕೊಡಲು ಹಿಂಜರಿಕೆ ಸರಿಯಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ರೈತ ಈ ದೇಶದ ಅನ್ನದಾತ, ಇಂತಹ ರೈತರ ಮಕ್ಕಳಿಗೆ ಹೆಣ್ಣು ಕೊಡಲು ಮುಂದೆ ಬರುತ್ತಿಲ್ಲದಿರುವುದು ನೋವಿನ ಸಂಗತಿ ಎಂದು ಶಾಸಕ ಎ. ಮಂಜು ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಟೈಮ್ಸ್ ಹಾಸನ ಪಿಯು ಕಾಲೇಜು ವತಿಯಿಂದ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದ ಅವರು, ಶಿಕ್ಷಣ ಕ್ರಾಂತಿ ಸರ್ಕಾರಿ, ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿದೆ. ಬಹುತೇಕ ರೈತರ ಹೆಣ್ಣು ಮಕ್ಕಳೇ ವ್ಯಾಸಂಗ ಮಾಡುತ್ತಿದ್ದಾರೆ. ಇವರ ವಿದ್ಯಾಭ್ಯಾಸ ಮುಗಿದ ಬಳಿಕ ರೈತನೇ ತನ್ನ ಹೆಣ್ಣುಮಗಳನ್ನು ರೈತ ಕುಟುಂಬಕ್ಕೆ ಕೊಡಲು ಮುಂದಾಗುವುದಿಲ್ಲ. ಇವತ್ತು ವಿದ್ಯೆ ಕಲಿತ ಮಕ್ಕಳಿಗೆ ಖಾಸಗಿ ಕ್ಷೇತ್ರದಲ್ಲಿಯೇ ಉತ್ತಮ ಕೆಲಸಗಳು ದೊರೆಯುತ್ತಿವೆ. ಹಲವು ರೈತ ಕುಟುಂಬದ ಪದವೀಧರರು ಕೃಷಿ ಕ್ಷೇತ್ರದಲ್ಲಿ ಸ್ವಾವಲಂಬಿ ಬದುಕು




ಕಂಡುಕೊಂಡು ಸಾಧನೆ ಮಾಡುತ್ತಿದ್ದಾರೆ. ಇದನ್ನು ಗಮನಿಸಿ ಮಕ್ಕಳ ಭವಿಷ್ಯವನ್ನು ರೂಪಿಸುವ ಜವಾಬ್ದಾರಿ ಪೋಷಕರ ಮೇಲಿದೆ ಎಂದು ಹೇಳಿದರು.

ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಓದಿರುವ ಬಹುತೇಕ ಮಂದಿ ಉನ್ನತ ಸ್ಥಾನದಲ್ಲಿದ್ದಾರೆ. ಇದರಲ್ಲಿ ರಾಜಕಾರಣಿ, ಅಧಿಕಾರಿಗಳು, ವಕೀಲರು, ವೈದ್ಯರು, ವಿಜ್ಞಾನಿಗಳು ಸೇರಿದ್ದಾರೆ. ಸಾಧನೆಗೆ ಕೇವಲ ಅಂಕ ಗಳಿಕೆಯೇ ಮುಖ್ಯವಾಗುವುದಿಲ್ಲ. ಮೊದಲು ದುಡಿಮೆಯ ಮಾರ್ಗವನ್ನು ಕಟ್ಟಿಕೊಂಡು ಇತರರಿಗೆ ನೆರವಾಗುವ ಕೆಲಸವನ್ನು ಕೈಗೊಳ್ಳಿ ಎಂದು ಅವರು ಸಲಹೆ ನೀಡಿದರು.

ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಗಂಗಾಧರ್ ಮಾತನಾಡಿ, ನಾವು ಅರಕಲಗೂಡಿನಲ್ಲಿ ಕಾಲೇಜು ತೆರೆದ ಸಂದರ್ಭದಲ್ಲಿ ಸಾಕಷ್ಟು ಚಾಲೆಂಜ್ ಗಳು ಎದುರಾದವು. ಆರಂಭದಿಂದ ಇಲ್ಲಿವರೆಗೆ ನಮಗೆ ಬೆಂಬಲವಾಗಿ, ಪ್ರೋತ್ಸಾಹದಾಕಯವಾಗಿ ನಮ್ಮ ಮಂಜಣ್ಣ ಅವರು ಇದ್ದಾರೆ. ಕಾಲೇಜಿನ ಎಲ್ಲಾ ಕಾರ್ಯಕ್ರಮಗಳು ಅವರಿಂದಲೇ ಆರಂಭಗೊಳ್ಳುತ್ತವೆ. ಇದರ ಫಲವಾಗಿ ನಾವು ನಾಲ್ಕು ಜಿಲ್ಲೆಗಳಲ್ಲಿ ಕಾಲೇಜು ತೆರೆದು ಮಕ್ಕಳಿಗೆ ಅತ್ಯಂತ ಹೆಚ್ಚಿನ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದೇವೆ. ಹಾಸನದಲ್ಲಿ ಶಾಲೆಯಿಂದ ಕಾಲೇಜು ತನಕ ಶಿಕ್ಷಣ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಇಷ್ಟಕ್ಕೆ ಸೀಮಿತಗೊಳ್ಳದೇ ಯುವ ಸಮುದಾಯಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಕೇಂದ್ರ, ಅಕ್ಷರ ಬುಕ್ ಹೌಸ್ ಮತ್ತು ಸಮಾಜಮುಖಿಯಾದ ಜಿಲ್ಲಾ ಮಟ್ಟದ ಅಕ್ಷರ ಪುರಸ್ಕಾರವನ್ನು ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ನಮ್ಮ ಮುಂದೆ ಮತ್ತಷ್ಟು ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳುವ ಅಭಿಲಾಷೆಯನ್ನು ಹೊಂದಿದ್ದೇವೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ನವೀನ್ ಉಲಿವಾಲ ಮಾತನಾಡಿದರು. ಪ್ರಜ್ವಲ್, ಕೃಷ್ಣಮೂರ್ತಿ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಗೌರವಿಸಲಾಯಿತು. ಪ್ರಥಮ ಪಿಯುಸಿಗೆ ದಾಖಲಾಗಿರುವ ವಿದ್ಯಾರ್ಥಿಗಳನ್ನು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಆತ್ಮೀಯವಾಗಿ ಸ್ವಾಗತಿಸಿದರು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿ ಕಾರ್ಯಕ್ರಮ ಜರುಗಿತು.

# ಅಪಘಾತ: ಇಬ್ಬರ ಸಾವು

ಹಾಸನ: ರಾಷ್ಟ್ರೀಯ ಹೆದ್ದಾರಿ 75ರ ಚನ್ನಪಟ್ಟಣ ವೃತ್ತದಿಂದ ಬಿಟ್ಟಗೌಡನಹಳ್ಳಿ ಕಡೆಗೆ ತೆರಳುತ್ತಿದ್ದ ಬೈಕ್‌ಗೆ ಲಾರಿ ಡಿಕ್ಕಿಯಾಗಿ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಚನ್ನರಾಯಪಟ್ಟಣ ತಾಲ್ಲೂಕು ಕುಂಬಾರಹಳ್ಳಿ ಗ್ರಾಮದ ಕೆ.ಟಿ. ಹರ್ಷ ಮೃತರು. ಕೌಶಿಕ ಗ್ರಾಮದ ದೊಡ್ಡಮ್ಮನ ಮನೆಯಲ್ಲಿದ್ದ ಯುವಕ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಜೂ. 30ರ ಸಂಜೆ ಬೈಕ್‌ನಲ್ಲಿ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಟ್ರ್ಯಾಕ್ಟರ್ ಚಾಲಕನ ನಿರ್ಲಕ್ಷ್ಯದಿಂದ ಮುಂದೆ ಕುಳಿತಿದ್ದ ವ್ಯಕ್ತಿ ಕೆಳಗೆ ಬಿದ್ದು ಮೃತಪಟ್ಟಿರುವ ಘಟನೆ ಅರಸೀಕೆರೆ ನಯಾರಾ ಪೆಟ್ರೋಲ್ ಬಂಕ್ ಸಮೀಪ ನಡೆದಿದೆ.

ಹಾರನಹಳ್ಳಿ ಬಿ. ತಾಂಡ್ಯ ಗ್ರಾಮದ ಉಮೇಶ ನಾಯ್ಕ ಮೃತರು. ಗೀಜಿಹಳ್ಳಿ ಗ್ರಾಮದ ಸ್ವಾಮಿ ನಾಯ್ಕ ಎಂಬುವರ ಜೊತೆ ಲೋಡಿಂಗ್ ಕೆಲಸ ಮಾಡುತ್ತಿದ್ದ ಅವರು ಮಂಗಳವಾರ ಮರಗಳನ್ನು ಲೋಡ್ ಮಾಡಿಕೊಂಡು ಅರಸೀಕೆರೆಯ ಸಾಮಿಲ್‌ಗೆ ಹೋಗುತ್ತಿದ್ದಾಗ ಚಾಲಕ ಮಣಿನಾಯ್ಕ ನಿರ್ಲಕ್ಷ್ಯದಿಂದ ಹಂಪ್ಸ್ ಹತ್ತಿಸಿದ್ದರಿಂದ ಆಯತಪ್ಪಿ ಉಮೇಶನಾಯ್ಕ ಕೆಳಗೆ ಬಿದ್ದಿದ್ದು ತಲೆ ಮೇಲೆ ಚಕ್ರ ಹರಿದಿದೆ. ಗಂಭೀರ ಗಾಯಗೊಂಡಿದ್ದ ಅವರನ್ನು ಹಾಸನದ ಹಿಮ್ಸ್‌ಗೆ ಕರೆತರುವಾಗಿ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜುಲೈ-03

**1979:** ತಮಿಳುನಾಡು ಮಾಜಿ ಮುಖ್ಯಮಂತ್ರಿ ಎಂ. ಗರ್ನರ್ ನಿಧನರಾದರು. ಅವರು ದ್ರಾವಿಡ ಮುಂದಾಳತ್ವದ ಪ್ರಮುಖ ನಾಯಕರಾಗಿದ್ದರು.

**2009:** ಭಾರತದಲ್ಲಿ ನಾಲ್ಕನೇ ಹಂತದ ಚಂದ್ರಯಾನ-1 ಉಪಗ್ರಹ ಯೋಜನೆಯ ಒಂದು ಹಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು.

**1608:** ಕ್ಯಾಪ್ಟನ್ ಕ್ರಿಸ್ಟೋಫರ್ ನ್ಯೂಪೋರ್ಟ್ ನೇತೃತ್ವದ ಇಂಗ್ಲೆಂಡ್‌ನ ವಾಣಿಜ್ಯ ದಳವು ಮೊದಲ ಬಾರಿಗೆ ಅಮೆರಿಕದ ವಿರ್ಜೀನಿಯಾ ರಾಜ್ಯದ ಹಮ್ಟನ್‌ನಲ್ಲಿ ಇಳಿಯಿತು.

**1863:** ಅಮೆರಿಕದ ಪೌರಯುದ್ಧದಲ್ಲಿ ಯುನಿಯನ್ ಪಡೆ ಗೆಲುವು ಸಾಧಿಸಿತು. ಇದು ಯುದ್ಧದ ಪ್ರಮುಖ ತಿರುವಾಗಿತ್ತು.

**1886:** ಜರ್ಮನಿಯ ಬಹುಮುಖ್ಯ ಭಾಷಾ ತಜ್ಞ ಮತ್ತು ತತ್ವಜ್ಞಾನಿ ಕಾರ್ಲ್ ಬೆನ್ಸ್ ಮೊಟ್ಟ ಮೊದಲ ಕಾರ್‌ಗೆ ಪೇಟೆಂಟ್ ಪಡೆದರು.

**1962:** ಅಲ್ಜೀರಿಯಾ, ಫ್ರಾನ್ಸ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

### ಜನನ

**1883:** ಫ್ರಾನ್ಸ್ ಕಾಫ್ಕಾ, ಜರ್ಮನ್ ಭಾಷೆಯ ಪ್ರಸಿದ್ಧ ಕಾದಂಬರಿಕಾರ.

**1890:** ವಿದ್ಯಾಪತಿ ತಿವಾರಿ, ಭೋಜಪುರಿ ಸಾಹಿತ್ಯದ ಪ್ರಮುಖ ಕವಿ.

### ಮರಣ

**1980:** ರಾಮಕೃಷ್ಣ ಹೆಗಡೆ ಅವರ ತಾಯಿ ಸೀತಾಬಾಯಿ ಹೆಗಡೆ.

**1971:** ಜಿಮ್ ಮೋರಿಸನ್, ಬ್ಯಾಂಡ್‌ನ ಗಾಯಕ

# ಕಾರ್ಮಿಕ ಇಲಾಖೆಯಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಕಾರ್ಮಿಕ ಇಲಾಖೆಯಿಂದ ಇರುವ ಸವಲತ್ತುಗಳು ಅರ್ಹರಿಗೆ ತಲುಪಬೇಕೆಂದರೆ ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಕಾರ್ಯಕರ್ತರು ಪಟ್ಟಣದ ಕಾರ್ಮಿಕ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಅಧಿಕಾರಿಗಳು ಸಾರ್ವಜನಿಕರ ಜೊತೆ ಸೌಜನ್ಯದಿಂದ ವರ್ತಿಸುವುದಿಲ್ಲ. ಮಧ್ಯವರ್ತಿಗಳ ಕೆಲಸ ಕಾರ್ಯಗಳಿಗೆ ಮನ್ನಣೆ ನೀಡುತ್ತಿದ್ದು ಕಾರ್ಮಿಕರು ಅದರಿಂದ ತೊಂದರೆ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿ ವೇತನವನ್ನು ಕಳೆದ 2 ವರ್ಷಗಳಿಂದ ನೀಡದೆ ಸತಾಯಿಸಲಾಗುತ್ತಿದೆ ಎಂದರು.

ಕರವೇ ಅಧ್ಯಕ್ಷ ವಿ.ಎಸ್. ಭೋಜೇಗೌಡ ಮಾತನಾಡಿ, ಸರ್ಕಾರ ಅಸಂಘಟಿತ ಕಾರ್ಮಿಕರಿಗೆ ಅವರ ಮಕ್ಕಳಿಗೆ ವಿದ್ಯಾರ್ಥಿ ವೇತನ ಸೇರಿದಂತೆ ಎಲ್ಲಾ ರೀತಿಯ ಮೂಲ ವ್ಯವಸ್ಥೆ ಮಾಡುತ್ತಿದೆ. ಆದರೆ ಇಲ್ಲಿಯ ಗಣಕೀಕೃತ ಕೆಲಸ ಮಾಡುವ ವ್ಯಕ್ತಿಯೊಬ್ಬರು ಸಾರ್ವಜನಿಕರ ಜೊತೆ ಉಡಾಫೆ ಮಾತಾಡುವುದಲ್ಲದೆ ಹಣ ಕೊಟ್ಟರೆ ಹಾಗೂ ಮಧ್ಯವರ್ತಿಗಳ ಜೊತೆ



ಬಂದರೆ ಶೀಘ್ರವೇ ಕೆಲಸ ಮಾಡುವ ಪ್ರವೃತ್ತಿ ಬಂದಿದೆ. ಅಲ್ಲದೆ ಯಾವುದೇ ಕಾರ್ಮಿಕರ ಸಂಕಷ್ಟ ಕೇಳದಂತ ಸ್ಥಿತಿ ಈ ತಾಲ್ಲೂಕಿನಲ್ಲಿದೆ. ನಿತ್ಯ ಬಾಲ ಕಾರ್ಮಿಕರು ಹಾಗೂ ವಿವಿಧ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಸರಿಯಾಗಿ ಮಾಹಿತಿ ಇಲ್ಲ. ಕೂಡಲೇ ಸಮಸ್ಯೆಗಳ ಅರಿತು ಸಾರ್ವಜನಿಕರ ಜೊತೆ ಉತ್ತಮ ಬಾಂಧವ್ಯ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ಕಚೇರಿಗೆ ಬೀಗ ಹಾಕಿ ಪ್ರತಿಭಟಿಸುವುದಾಗಿ ಎಚ್ಚರಿಕೆ ನೀಡಿದರು.

ತಾಲ್ಲೂಕಿನಲ್ಲಿ ಹೊರರಾಜ್ಯದ ಅಸ್ಸಾಂ ಕಾರ್ಮಿಕರ ಹಾವಳಿ ಮಿತಿ ಮೀರಿದ್ದು ಇತ್ತೀಚಿನ ದಿನಗಳಲ್ಲಿ ಹೆಣ್ಣುಮಕ್ಕಳ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಯುತ್ತಿದ್ದರೂ ಕಾರ್ಮಿಕ ಇಲಾಖೆ ಹಾಗೂ ಪೊಲೀಸ್ ಇಲಾಖೆ ಕಣ್ಮುಚ್ಚಿ ಕುಳಿತಿದೆ.

ತಾಲ್ಲೂಕಿನಲ್ಲಿ 2 ಸಾವಿರಕ್ಕೂ ಹೆಚ್ಚು ಅಸ್ಸಾಂ ಕಾರ್ಮಿಕರು ನೆಲೆಯೂರಿರುವುದು ಮಾಹಿತಿ ಇದೆ. ಇಲ್ಲಿ ಕೇವಲ 200 ಜನ ಮಾತ್ರ ನೊಂದಣಿಯಾಗಿದ್ದಾರೆಂದು ಸುಳ್ಳು ಮಾಹಿತಿಯನ್ನು ನೀಡುತ್ತಿದ್ದಾರೆ. ಮುಂದೆ ಇದರಿಂದ ತೊಂದರೆಯಾದರೆ ನೇರ ಹೊಣೆ ಈ ಇಲಾಖೆಯೆ ಆಗಿರುತ್ತದೆ. ಕೂಡಲೆ ಇದರ ಬಗ್ಗೆ ಪೊಲೀಸ್ ಇಲಾಖೆ ಹಾಗೂ ಪೊಲೀಸ್ ಇಲಾಖೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಿ ಮುಂದಾಗುವ ಅನಾಹುತ ತಪ್ಪಿಸುವಂತೆ ಆಗ್ರಹಿಸಿದರು.

ಕರವೇ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್, ಉಪಾಧ್ಯಕ್ಷ ಮಂಜು ಆಚಾರ್, ಹುಸೇನ್, ಕುಮಾರ್ ಇತರರಿದ್ದರು.

# ಮಾಧ್ಯಮ ಸಮಾಜ ಬದಲಾವಣೆಯ ಅಸ್ತ್ರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಮ್ಮ ಬರವಣಿಗೆ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದುವಲ್ಲಿ ಪತ್ರಕರ್ತರ ಸೇವೆ ಹಾಗೂ ಕಾರ್ಯ ಶ್ಲಾಘನೀಯ ಎಂದು ರೋಟರಿ ಕ್ಲಬ್ ಅಧ್ಯಕ್ಷೆ ಜ್ಯೋತಿ ಶ್ರೀನಿವಾಸ್ ಹೇಳಿದರು.

ಪಟ್ಟಣದ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಭವನದಲ್ಲಿ ರೋಟರಿ ಕ್ಲಬ್ ವತಿಯಿಂದ ಪತ್ರಿಕಾ ದಿನಾಚರಣೆ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ಮಾಧ್ಯಮ ಎಂಬುದು ಸಮಾಜದ ಬದಲಾವಣೆಯ ಅಸ್ತ್ರ ಎಂದರು.

ಸದಾ ಸಮಾಜ ಸುಧಾರಣೆ ಬಗ್ಗೆ ಚಿಂತನೆ ನಡೆಸುವ ಪತ್ರಕರ್ತರ ಬದುಕು ಮೊಣಚಾದ ತೂಗು ಕತ್ತಿಯ ಮೇಲೆ ನಿಂತಿರುತ್ತದೆ. ಯಾರಿಂದಲೂ ಏನನ್ನೂ ನಿರೀಕ್ಷಿಸದೆ ಕಾರ್ಯನಿರತರಾಗಿ ಕರ್ತವ್ಯ ನಿರ್ವಹಿಸುವ ಪರ್ತಕರ್ತರ ಜೀವನ ಸಂಕಷ್ಟದಲ್ಲಿದ್ದರೂ ಸಹ ಸಮಾಜದ ಹಿತ ಹಾಗೂ ಏಳಿಗೆ ಬಯಸುವ ಮನೋಬಾವ ಹೊಂದಿರುವುದು ವಿಶೇಷ ಸಂಗತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸುತ್ತಮುತ್ತ ನಡೆಯುವ ಅನ್ಯಾಯ, ಅಪಘಾತ, ಅಭಿವೃದ್ಧಿ ಸೇರಿದಂತೆ ಎಲ್ಲ ಕಾರ್ಯಕ್ರಮಗಳು



ಮತ್ತು ಘಟನೆಗಳನ್ನು ಸಂಗ್ರಹಿಸಿ ಜನತೆಗೆ ಅರ್ಥವಾಗುವ ರೀತಿಯಲ್ಲಿ ಬರೆದು ಮುಂಜಾಣೆಯೇ ಪತ್ರಿಕೆ ಮೂಲಕ ಮನೆ ಮನೆಗೆ ತಲುಪುವಂತೆ ಮಾಡುವ ಪತ್ರಕರ್ತರ ಸೇವೆ ಅನನ್ಯ ಎಂದು ತಿಳಿಸಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದರಾಜು ಮಾತನಾಡಿ, ಸಮಾಜವು ಮಾಧ್ಯಮ ಹಾಗೂ ಪತ್ರಕರ್ತರ ಮೇಲೆ ಅಪಾರವಾದ ನಂಬಿಕೆ, ಗೌರವ ಹಾಗೂ ವಿಶ್ವಾಸ ಇಟ್ಟುಕೊಂಡಿದೆ. ಉತ್ತಮ ಹಾಗೂ ಮೌಲ್ಯಯುತ ವರದಿ ನೀಡುವ ಮೂಲಕ ಅದನ್ನು ಉಳಿಸಿಕೊಂಡು ಸಾಗುವುದು ನಮ್ಮ ಕರ್ತವ್ಯವಾಗಿದೆ ಎಂದು ಪತ್ರಕರ್ತರಿಗೆ ಕಿವಿಮಾತು ಹೇಳಿದರು.

ರೋಟರಿ ಕ್ಲಬ್ ವತಿಯಿಂದ ಪತ್ರಕರ್ತರನ್ನು ಅಭಿನಂದಿಸಲಾಯಿತು.

ರೋಟರಿ ಕ್ಲಬ್ ಕಾರ್ಯದರ್ಶಿ ಹೇಮಚಂದ್ರ, ಖಜಾಂಚಿ ವೆಂಕಟೇಶ್, ನಿರ್ದೇಶಕರಾದ ಪದ್ಮನಾಭ, ಜಯರಾಘವೇಂದ್ರ, ಕಿಶೋರ್ ಕುಮಾರ್, ಪುಟ್ಟರಾಜ್, ನಟರಾಜ್, ರಶ್ಮಿ ಹರಿಶ್, ದಿವ್ಯ ಶರತ್, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎ.ನಟೇಶ್, ಮಾಜಿ ಅಧ್ಯಕ್ಷರಾದ ಎ.ಎಂ.ಜಯರಾಂ, ಎ.ಎಲ್.ನಾಗೇಶ್, ಜಿಲ್ಲಾ ನಿರ್ದೇಶಕ ಕೆ.ಪಿ.ಪುಟ್ಟರಾಜ್, ಪದಾಧಿಕಾರಿಗಳಾದ ಬಿ.ಟಿ.ವೆಂಕಟಸ್ವಾಮಿ, ಶಾಮ್‌ಸುಂದರ್ ಕೆ.ಅಣ್ಣೇನಹಳ್ಳಿ, ಹಿ.ಕೃ.ಚಂದ್ರು, ಆರ್.ಶ್ರೀನಿವಾಸ್ ಉಳ್ಳಾವಳ್ಳಿ, ಪಾಂಡುರಂಗ, ಸಿ.ವಿ.ಲೋಹಿತ್, ಸದಸ್ಯರಾದ ನಂದನ್ ಪುಟ್ಟಣ್ಣ, ಐ.ಕೆ.ಮಂಜುನಾಥ್, ಹಂಚಿಹಳ್ಳಿ ಮಂಜುನಾಥ್, ಜಿ4 ಗೋವಿಂದ್ ಹಾಗೂ ಇತರರು ಇದ್ದರು.

# ಶಾಲಾ ಕಾಲೇಜುಗಳಲ್ಲಿ ಸಿಪಿಆರ್ ತರಬೇತಿ ಶಿಬಿರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದಿಂದ ಜೀವ ಹಾನಿಯಾಗುತ್ತಿದ್ದು ಸಿಪಿಆರ್ (ಕಾರ್ಡಿಯೋಪಲ್ಮನರಿ ರಿಸುಸಿಟೇಶನ್) ಮತ್ತು ಪ್ರಥಮ ಚಿಕಿತ್ಸೆಯ ಬಗ್ಗೆ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ಶಾಲೆ-ಕಾಲೇಜುಗಳಲ್ಲಿ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗುವುದು ಎಂದು ರೋಟರಿ




ಕ್ಲಬ್ ಆಫ್ ಸೆಂಟ್ರಲ್ ಅಧ್ಯಕ್ಷ ನಾಗೇಶ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ರೋಟರಿ ಕ್ಲಬ್ ಆಫ್ ಸೆಂಟ್ರಲ್ ವತಿಯಿಂದ ಹೃದಯಾಘಾತದಿಂದದ ಕುಸಿದುಬಿದ್ದ ಸಂದರ್ಭದಲ್ಲಿ ಜೀವ ಉಳಿಸಲು ಪ್ರಥಮ ಚಿಕಿತ್ಸೆ ನೀಡುವ ಸಲುವಾಗಿ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಜಿಲ್ಲಾದ್ಯಂತ ನಿರಂತರವಾಗಿ ತರಬೇತಿ ನೀಡಲಾಗುವುದು ಎಂದು ಹೇಳಿದರು. ಭಾರತೀಯ ವೈದ್ಯಕೀಯ ಸಂಘದ ಮಾಜಿ ಅಧ್ಯಕ್ಷ ಡಾ.ಎನ್. ರಮೇಶ್ ಸೇರಿ ತರಬೇತಿ ಪಡೆದ ವೈದ್ಯಕೀಯ ವಿದ್ಯಾರ್ಥಿಗಳು, ತಜ್ಞ ವೈದ್ಯರಿಂದ ತರಬೇತಿ ಕೊಡಿಸಲಾಗುವುದು. ಜಿಲ್ಲೆಯಾದ್ಯಂತ ಶಾಲೆಗಳು, ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸಿಪಿಆರ್ ಮತ್ತು ಪ್ರಥಮ ಚಿಕಿತ್ಸೆ ತರಬೇತಿ ಶಿಬಿರಗಳನ್ನು ಆಯೋಜಿಸಲು ಮುಂದಾಗಿದೆ. ಈ ಶಿಬಿರಗಳ ಮೂಲಕ ಯುವಕ-ಯುವತಿಯರು, ವಿದ್ಯಾರ್ಥಿಗಳು, ಶಿಕ್ಷಕರು, ಸರ್ಕಾರಿ ಸಿಬ್ಬಂದಿ, ಚಾಲಕರು, ವ್ಯಾಪಾರಸ್ಥರು, ರೈತರು ಮತ್ತು ಮಹಿಳೆಯರಿಗೆ ಸಿಪಿಆರ್ ತರಬೇತಿಯನ್ನು ಒದಗಿಸುವ ಗುರಿಯನ್ನು ಹೊಂದಲಾಗಿದೆ ಎಂದರು. ಪತ್ರಕರ್ತ ಮಂಜು ಬನವಾಸೆ ಮಾತನಾಡಿ, ಸಿಪಿಆರ್ ಒಂದು ತುರ್ತು ಚಿಕಿತ್ಸಾ ವಿಧಾನವಾಗಿದ್ದು, ಹೃದಯಸ್ತಂಭನ ಅಥವಾ ಉಸಿರಾಟ ನಿಂತ ಸಂದರ್ಭದಲ್ಲಿ ರಕ್ತ ಸಂಚಾರ ಮತ್ತು ಉಸಿರಾಟವನ್ನು ಮರುಸ್ಥಾಪಿಸಿ ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ತರಬೇತಿಯ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಿ, ಅಮೂಲ್ಯ ಜೀವಗಳನ್ನು ಉಳಿಸಲು ನೆರವಾಗಲಿದೆ. ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು, ಪ್ಯಾರ ಮೆಡಿಕಲ್ ಕಾಲೇಜುಗಳು ನಮ್ಮೊಂದಿಗೆ ಕೈ ಜೋಡಿಸಲಿವೆ ಎಂದು ತಿಳಿಸಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248